## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.506/2019**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ನಂ.1ಃ ಬಸವಂತರೆಡ್ಡಿ ತಂದೆ ಮಲ್ಲಿಕಾರ್ಜುನರೆಡ್ಡಿ ನರಸರೆಡ್ಡಿ
ವಃ 30 ವರ್ಷ, ಉಃ ಒಕ್ಕಲುತನ

2 ಚೆನ್ನಾರೆಡ್ಡಿ ತಂದೆ ಮಲ್ಲಿಕಾರ್ಜುನ ರೆಡ್ಡಿ ನರಸರೆಡ್ಡಿ
ವಃ 26 ವರ್ಷ, ಉಃ ಒಕ್ಕಲುತನ

3. ನಾಗಪ್ಪಾ ತಂದೆ ಮಹಾದೇವ ಪುಜಾರಿ
ವಃ 26 ವರ್ಷ, ಉಃ ಒಕ್ಕಲುತನ

4. ಆಕಾಶ ತಂದೆ ಬಸಣ್ಣ ತಿರುಮಲಿ
ವಃ 27 ವರ್ಷ, ಉಃ ಟ್ರ್ಯಾಕ್ಟರ ಚಾಲಕ
ಸಾಃ ಎಲ್ಲರೂ ಹಾಬಾಳ (ಟಿ) ಗ್ರಾಮ, ತಾಃ ಸೇಡಂ

----

**ದೋಷಾರೋಪಣೆ**

ನಾನು ಶ್ರೀ ಬಾಲು, ಬಿ.ಎ., ಎಲ್‌ಎಲ್‌ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 09-08-2019 ರಂದು ಬೆಳಗ್ಗೆ 08.30 ಗಂಟೆಯ ಸುಮಾರಿಗೆ ಸೇಡಂ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಹಾಬಾಳ (ಟಿ) ಗ್ರಾಮದ ಊರ ಹೊರಗಡೆ ಇರುವ ಚಾಸಾ 1 ನೆದ್ದವರ ಹೊಲ ಸರ್ವೆ ನಂ 34 ಹಿಸ್ಸಾ 1 ರಲ್ಲಿ ಇದ್ದ ಕಾಲು ದಾರಿಯಲ್ಲಿ ಆರೋಪಿ 1 ರಿಂದ 4 ನೇದ್ದವರು ಕೂಡಿ ತಮ್ಮ ಹೊಲಕ್ಕೆ ಔಷದಿ ಹೊಡೆಯಲು ಕಚ್ಚಾ ರಸ್ತೆಯಿಂದ ಟ್ರಾಕ್ಟರ ತೆಗೆದುಕೊಂಡು ಹೋಗುತ್ತಿದ್ದಾಗ ಅಲ್ಲೆ ಹೊಲದಲ್ಲಿದ್ದ ಚಾಸಾ 1 ನೇದ್ದವರು ತಮ್ಮ ಹೊಲದ ಹತ್ತಿರ ರಸ್ತೆಯಲ್ಲಿ ಬಂದು ಆರೋಪಿತರಿಗೆ ಮಳೆ ಬಿದ್ದು ಕೆಸರಾಗಿದೆ ಕೆಸರಲ್ಲಿ ಟ್ರಾಕ್ಟರ ಹೊದರೆ ರಸ್ತೆ ಹಾಗೂ ನಮ್ಮ ಹೊಲ ಹಾಳಾಗುತ್ತದೆ ನೀವು ಟ್ರಾಕ್ಟರ ತೆಗೆದುಕೊಂಡು ಹೊಗಬೇಡಿರಿ ಅಂತಾ ಹೇಳಿದ್ದಕ್ಕೆ ಆರೋಪಿತರ ಪೈಕಿ ಆರೋಪಿ 2 ನೇದ್ದವರು ಕೈ ಮುಷ್ಟಿ ಮಾಡಿ ಚಾಸಾ 1 ನೆದ್ದವರ ಬೆನ್ನ ಮೇಲೆ ಹೊಡೆದು ಗುಪ್ತಗಾಯ ಪಡಿಸಿದ್ದು, ಆರೋಪಿ 3 ಮತ್ತು 4 ನೇದ್ದವರು ಚಾಸಾ 1 ನೇದ್ದವನಿಗೆ ಒತ್ತಿ ಹಿಡಿದುಕೊಂಡು ಕೈಯಿಂದ ಹೊಟ್ಟೆಗೆ ಬೆನ್ನಿಗೆ ಇತರಕಡೆ ಹೊಡೆದು ಗುಪ್ತಗಾಯ ಪಡಿಸಿದ್ದು ಆ ಮೂಲಕ ಭಾ.ದಂ.ಸಂ. 323 ಸಂಗಡ 34 ರಲಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

12/12/19

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ... ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಆರೋಪಿ 1 ನೇದ್ದವನು ... ನೇದ್ದವರಿಗೆ ಕಲ್ಲಿನಿಂದ ಎಡಗಡೆ ಹಣೆಯ ಮೇಲೆ ಹೊಡೆದು ರಕ್ತಗಾಯ ಪಡಿಸಿದ್ದು ಆ ಮೂಲ... ಭಾ.ದಂ.ಸಂ. 324 ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಆರೋಪಿತರು ಚಾಸಾ 1 ನೇದ್ದವನಿಗೆ ಭೋಸಡಿ ಮಗನೆ ನಿನ್ಯಾರು ನಮಗೆ ಕೇಳುವವನು ಇದು ಸಾರ್ವಜನಿಕ ರಸ್ತೆಯಿದೆ ಇದರಿಂದ ನಾವು ಹೋಗುತ್ತೇವೆ ನೀನು ಏನು ಮಾಡುತ್ತಿ ಮಾಡಿಕೊ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿರುತ್ತಾರೆ ಆ ಮೂಲಕ ಭಾ.ದಂ.ಸಂ. 504 ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಆರೋಪಿತರು ಚಾಸಾ 1 ನೇದ್ದವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿನಗೆ ಹೊಡೆದು ಖಲಾಸ ಮಾಡುತ್ತೇವೆ ಅಂತಾ ಜೀವದ ಬೇದರಿಕೆ ಹಾಕಿದ್ದು ಆ ಮೂಲಕ ಭಾ.ದಂ.ಸಂ. 506 ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ದಿನಾಂಕ: 12-12-2024

12/12/24

ಪ್ರ.ದ.ನ್ಯಾದಂ. ಸೇಡಂ.